**A.C.No.1/2021**
**RW:1**

ದಿನಾಂಕಃ 03-03-2026 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಎದುರುದಾರರ ಪರವಾಗಿಃ ಶ್ರೀ ಟಿ ಎಂ ಕೆ ವಕೀಲರ ಪರವಾಗಿ ಶ್ರೀ ಜಿ ಆರ್ ಎಸ್ ವಕೀಲರಿಂದಃ-**

ಈ ಪ್ರಕರಣ ತರೀಕೆರೆ ತಾಲ್ಲೂಕು ಗಾಳಿಹಳ್ಳಿ ಗ್ರಾಮದ ಸರ್ವೆ ನಂಬರ್ 59/1A ಗೆ ಸಂಬಂಧಿಸಿದಂತೆ ನಡೆಯುತ್ತಿದೆ. ಸದರಿ ಜಮೀನಿಗೆ

ಸಂಬಂಧಿಸಿದಂತೆ ಎರಡನೇ ಬಾರಿ ನೀಡಲಾದ ಪರಿಹಾರದ ಹಣಕ್ಕೆ ಸಂಬಂಧಿಸಿದಂತೆ ಈ ಪ್ರಕರಣ ನಡೆಯುತ್ತಿದೆ. ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡದಲ್ಲಿ ಓದಲು ಮತ್ತು ಬರೆಯಲು ಸ್ವಲ್ಪ ಮಟ್ಟಿಗೆ ಬರುತ್ತದೆ. ನ್ಯಾಯಾಲಯಕ್ಕೆ ನನ್ನೊಂದಿಗೆ ನನ್ನ ಗಂಡ ಬರುತ್ತಾರೆ. ಅವರಿಗೆ ಓದಲು ಮತ್ತು ಬರೆಯಲು ಬರುತ್ತದೆ. ಅವರು ಸರ್ಕಾರಿ ಪಶು ವೈದ್ಯರಾಗಿ ನಿವೃತ್ತಿ ಹೊಂದಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ವಕೀಲರಿಗೆ ನಾನು ಮತ್ತು ನನ್ನ ಗಂಡ ಮಾಹಿತಿಯನ್ನು ನೀಡಿದ್ದೇವೆ. ಮೊದಲನೇ ಬಾರಿಗೆ ಒಂದು ಕೋಟಿ ಎಪ್ಪತ್ತಮೂರು ಲಕ್ಷ ಚಿಲ್ಲರೆ ಹಣವನ್ನು ಪರಿಹಾರವಾಗಿ ನೀಡಲಾಗಿತ್ತು. ಮೊದಲನೇ ಬಾರಿಗೆ ನೀಡಲಾದ ಪರಿಹಾರದ ಹಣದ ಪೈಕಿ ನಿಮಗೆ ಮತ್ತು 5 ನೇ ಎದುರುದಾರರಿಗೆ 15 ಲಕ್ಷ ಹಣವನ್ನು ನೀಡಲಾಗಿದೆ ಎಂದು ಹೇಳಿದ್ದೀರಿ ಅದನ್ನು ನೀವು ಯಾರಿಂದ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ 1 ರಿಂದ 3 ನೇ ಎದುರುದಾರರು ಸದರಿ ಹಣವನ್ನು ನಮ್ಮ ಬ್ಯಾಂಕ್ ಖಾತೆಗಳಿಗೆ ಹಾಕಿದ್ದರು ಎನ್ನುತ್ತಾರೆ. 1 ರಿಂದ 3 ನೇ ಎದುರುದಾರರ ಪೈಕಿ ಯಾರು ಸದರಿ ಹಣವನ್ನು ಹಾಕಿದ್ದರು ಎಂದರೆ ಸಾಕ್ಷಿ 1 ನೇ ಎದುರುದಾರರು ಎನ್ನುತ್ತಾರೆ. ಯಾವ ಬ್ಯಾಂಕಿನ ಖಾತೆಗೆ ಅವರು ಹಣವನ್ನು ಹಾಕಿದ್ದರು ಎಂದರೆ ಸಾಕ್ಷಿ ಯಾವ ಬ್ಯಾಂಕು ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ. ಅದು ಯಾವ ಊರಿನಲ್ಲಿದೆ ಎಂದರೆ ಸಾಕ್ಷಿ ತರೀಕೆರೆಯಲ್ಲಿರುವ ಬ್ಯಾಂಕು ಎನ್ನುತ್ತಾರೆ. ಅದನ್ನು ಯಾವ ಇಸವಿಯಲ್ಲಿ ಹಾಕಲಾಗಿದೆ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಮೊದಲನೇ ಬಾರಿಗೆ 1 ಕೋಟಿ ಎಪ್ಪತ್ತಮೂರು ಲಕ್ಷ ಚಿಲ್ಲರೆ ಹಣವನ್ನು ಪರಿಹಾರವಾಗಿ ನೀಡಿದ್ದ ಬಗ್ಗೆ ನಿಮಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಹಣದಲ್ಲಿ ನಮಗೆ ಸಮಭಾಗವನ್ನು ನೀಡುವಂತೆ ಕೇಳಿದ್ದೆವು ಆದರೆ 1 ರಿಂದ 3 ನೇ ಎದುರುದಾರರು ತಲಾ 15 ಲಕ್ಷವನ್ನು ಮಾತ್ರ

ಕೊಟ್ಟಿದ್ದರು. ಆ ಬಗ್ಗೆ ನೀವು ಭೂಸ್ವಾಧೀನಾಧಿಕಾರಿಗಳಿಗೆ ಅಥವಾ ಪೊಲೀಸರಿಗೆ ದೂರನ್ನು ನೀಡಿದ್ದೀರಾ ಎಂದರೆ ಸಾಕ್ಷಿ ಭೂಸ್ವಾಧೀನಾಧಿಕಾರಿಗಳಿಗೆ ಕೊಟ್ಟಿದ್ದೆವು ಎನ್ನುತ್ತಾರೆ.

(ಈ ಹಂತದಲ್ಲಿ 1 ರಿಂದ 3 ನೇ ಎದುರುದಾರರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲವನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.